ಶ್ರೀ ಮುರುಗೇಶ್ ಆರ್. ನಿರಾಣಿ : ಕೋರ್ಟ್‌ನಲ್ಲಿ ವಿಷಯವಿರುವುದರಿಂದ ಬೇಗನೆ ಮಾಡುತ್ತೇವೆ. ಇದಕ್ಕೆ ಹಣವನ್ನು ಕೊಟ್ಟಿದ್ದೇವೆ.

ಶ್ರೀ ಎನ್. ಸಂಪಂಗಿ : ಈಗಾಗಲೇ ತಡೆಯಾಜ್ಞೆಯಾಗಿ ಒಂದು ವರ್ಷ ಆಗಿ ಹೋಗಿದೆ. ನಿಮ್ಮ ಅಧಿಕಾರಿಗಳು ಏಕೆ ಭಯ ಪಡುತ್ತಿದ್ದಾರೆ ?

ಅಧ್ಯಕ್ಷರು : ಈ ವಿಷಯ ಕೋರ್ಟ್‌ನಲ್ಲಿರುವುದರಿಂದ ಇಷ್ಟೇದಿವಸವೆಂದು ಹೇಗೆ ಹೇಳುವುದು ?

ಶ್ರೀ ಮುರುಗೇಶ್ ಆರ್. ನಿರಾಣಿ : ಕೋರ್ಟ್‌ನಲ್ಲಿರುವುದರಿಂದ ಇದಕ್ಕೆ Senior Counsel ಅನ್ನು ನೇಮಕ ಮಾಡುತ್ತಿದ್ದೇವೆ. ಈಗಾಗಲೇ Senior Advocate ಅನ್ನು appointment ಮಾಡಿದ್ದೇವೆ. ಇದು ತೀರ್ಮಾನವಾದ ದಿವಸವೇ ನಾವು payment ಮಾಡುವುದಕ್ಕೆ ಪ್ರಾರಂಭ ಮಾಡುತ್ತೇವೆ.

ಹೇಮಾವತಿ ನಾಲೆಯಿಂದ ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ ಕುಡಿಯುವ ನೀರು

151(968) ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ತುಮಕೂರು ಹೇಮಾವತಿ ನಾಲೆಯಿಂದ ಹೇಮಾವತಿ ನೀರನ್ನು ಕುಡಿಯುವ ನೀರಿನ ಉದ್ದೇಶಕ್ಕಾಗಿ ಚಿಕ್ಕನಾಯಕಹಳ್ಳಿ ತಾಲ್ಲೂಕು ಸಾಸಲು ಪೆಮ್ಮಲದೇವರ ಹಳ್ಳಿ ಕೆರೆ, ಶೆಟ್ಟಿಕೆರೆ ಮೂಲಕ ಬೋರನ ಕಣಿವೆಗೆ ಹರಿಸುವ ಯೋಜನೆಯು ಯಾವ ಹಂತದಲ್ಲಿದೆ :

ಆ) ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗುವುದೇ ಹಾಗೂ ಆಯವ್ಯಯದಲ್ಲಿ ಹಣ ನಿಗದಿಪಡಿಸಿ ಮಂಜೂರಾತಿ ಮಾಡಲಾಗಿದೆಯೇ ;

ಇ) ಇಲ್ಲದಿದ್ದಲ್ಲಿ, ಈ ಯೋಜನೆಯ ಅನುಷ್ಠಾನಕ್ಕೆ ಸರ್ಕಾರವು ಗಮನ ಹರಿಸಲು ಕಾರಣಗಳೇನು ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ತುಮಕೂರು ಶಾಖಾ ನಾಲೆಯಿಂದ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟಿಕೆರೆ ಹೋಬಳಿಯ ಸಾಸಲು ಪೆಮ್ಮಲದೇವರಹಳ್ಳಿ ಕೆರೆ, ಶೆಟ್ಟಿಕೆರೆ ಮುಖಾಂತರ ಬೋರನಕಣಿವೆ ಕೆರೆಯನ್ನು ಹೊರತುಪಡಿಸಿ ಈ ತಾಲ್ಲೂಕಿನ ಒಟ್ಟು 26 ಕೆರೆಗಳಿಗೆ ಅಂದರೆ 22 ಕೆರೆಗಳಿಗೆ ಗುರುತ್ವಾಕರ್ಷಣೆ ಮುಖಾಂತರ ಮತ್ತು ನಾಲ್ಕು ಕೆರೆಗಳಿಗೆ ಏತ ನೀರಾವರಿ ಮುಖಾಂತರ ಕುಡಿಯುವ ನೀರಿನ ಉದ್ದೇಶಕ್ಕಾಗಿ ನೀರು ಒದಗಿಸುವ ಪ್ರಸ್ತಾವನೆಯನ್ನು ರೂ. 102.60 ಕೋಟಿಗಳಿಗೆ ಕಾವೇರಿ ನೀರಾವರಿ ನಿಗಮವು ತಯಾರಿಸಿರುತ್ತದೆ. ಇದು ಕುಡಿಯುವ ನೀರಿನ ಯೋಜನೆಯಾಗಿದ್ದು, ಈ ಯೋಜನೆಗೆ ಕಾವೇರಿ ನೀರಾವರಿ ನಿಗಮದ ತಾಂತ್ರಿಕ ಉಪ ಸಮಿತಿಯು ತೀರುವಳಿ ನೀಡಿದೆ. ಈ ಯೋಜನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವತಿಯಿಂದ ಕೈಗೊಳ್ಳುವಂತೆ ಕೋರಿ ಪ್ರಸ್ತಾವನೆಯು ಸರ್ಕಾರದಲ್ಲಿ ಸ್ವೀಕೃತವಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಆ) ಈ ಯೋಜನೆಯು ಕುಡಿಯುವ ನೀರಿನ ಯೋಜನೆಯಾಗಿರುವುದರಿಂದ ಈ ಯೋಜನೆಗೆ ಕಾವೇರಿ ನೀರಾವರಿ ನಿಗಮದ ತಾಂತ್ರಿಕ ಉಪ ಸಮಿತಿಯ ತೀರುವಳಿ ನಿಡಲಾಗಿದ್ದು, ಆಡಳಿತಾತ್ಮಕ ಅನುಮೋದನೆ ನೀಡಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮುಖಾಂತರ ಹಣ ನಿಗದಿಪಡಿಸಿಕೊಂಡು ನಿರ್ವಹಣೆ ಮಾಡಲಾಗುವುದು.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸಿ.ಬಿ. ಸುರೇಶ್ ಬಾಬು : ಮಾನ್ಯ ಅಧ್ಯಕ್ಷರೆ, ಹೇಮಾವತಿ ನದಿಯಿಂದ ಸುಮಾರು ಮೂರು ಹೋಬಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ತುಂಬಾ ಅಭಾವವಿರುವುದರಿಂದ ಕುಡಿಯುವ ನೀರನ್ನು ಒದಗಿಸಿ ಕೊಡುವುದಕ್ಕೆ ಹೇಮಾವತಿ ಜಲಾಶಯದಿಂದ ಬರುವ ನೀರನ್ನು 26 ಹಳ್ಳಿಗಳಿಗೆ ಒದಗಿಸಿಕೊಡಬೇಕೆಂದು ಜಲಸಂಪನ್ಮೂಲ ಸಚಿವರಿಗೆ ಕೇಳಿದ್ದೆ, ಇದರ ಜೊತೆಗೆ ಬೋರನಕಣಿವೆ ಕೆರೆಯನ್ನು ಹೊರತುಪಡಿಸಿ ಉಳಿದ ಎಲ್ಲಾ

ಹಳ್ಳಿಗಳಿಗೂ ಕೊಡುವುದಕ್ಕೆ ಅವಕಾಶವಿದೆ. ಇದಕ್ಕೆ ನಾವು ತೀರ್ಮಾನವನ್ನು ತೆಗೆದುಕೊಂಡಿದ್ದೇವೆಂದು ಹೇಳುತ್ತಿದ್ದಾರೆ. ಇವತ್ತು ಬೋರನಕಣಿವೆಗೆ ನೀರು ಏಕೆ ಬೇಕೆಂಬ ಬಗ್ಗೆ ಮಾನ್ಯ ಜಲಸಂಪನ್ಮೂಲ ಸಚಿವರನ್ನು ಏಕೆ ಕೇಳಬಯಸುತ್ತೇನೆಂದರೆ, ಅಲ್ಲಿ ನೀರನ್ನು ಶೇಖರಣೆ ಮಾಡುವುದಕ್ಕೆ ಒಳ್ಳೆಯ ಸ್ಥಳವಿದ್ದು, ಹೆಚ್ಚಿನ ನೀರನ್ನು ಶೇಖರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲಿ ನೀರಿನ ಸಮಸ್ಯೆ ಉದ್ಭವವಾದಂಥ ಸ೯ರ್ಭದಲ್ಲಿ ಅಲ್ಲಿಂದ ಬೇರೆ ಕಡೆಗಳಿಗೂ ನೀರನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಬೋರನಕಣಿವೆ ಕೆರೆಯನ್ನು ಸೇರಿಸಿಕೊಂಡು ಈ ಯೋಜನೆಯನ್ನು ತ್ವರಿತಗತಿಯಲ್ಲಿ ಮಾಡಿಕೊಡಬೇಕೆಂದು ಈ ಸಭೆಯ ಮುಖಾಂತರ ಮಾನ್ಯ ಮಂತ್ರಿಯವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು, ನಾನು ಕೇಳುತ್ತೇನೆ.

ಅಧ್ಯಕ್ಷರೆ : ಆಯಿತು, ಕೇಳಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರದಲ್ಲಿ ಬೋರನಕಣಿವೆ ಕೆರೆಯನ್ನು ಹೊರತುಪಡಿಸಿ 22 ಕೆರೆಗಳಿಗೆ ನೈಸರ್ಗಿಕವಾಗಿ ಮತ್ತು ನಾಲ್ಕು ಕೆರೆಗಳಿಗೆ ಏತ ನೀರಾವರಿ ಮುಖಾಂತರ ನೀರನ್ನು ಕೊಡುತ್ತೇವೆಂದು ಹೇಳಿದ್ದೀರಿ. ಇದಕ್ಕೆ 102 ಕೋಟಿ ರೂ.ಗಳು ಮಾತ್ರ ಖರ್ಚಾಗುತ್ತದೆಂದು ಹೇಳಿದ್ದೀರಿ. ಅದಕ್ಕೆ allocation 0.8 TMC ಅಷ್ಟು ಎಂದು ಹೇಳಿದ್ದೀರಿ. ಈ 0.8 TMC ನಲ್ಲಿ ನಾನು ನನ್ನ ಅನುಭವದ ಪ್ರಕಾರ ಹೇಳಬೇಕೆಂದರೆ 3–4 ಕೆರೆಗಳನ್ನು ಬಿಟ್ಟು ಹೆಚ್ಚಿಗೆ ನೀರನ್ನು ಕೊಡುವುದಕ್ಕೆ ಆಗುವುದಿಲ್ಲ. ದಯಮಾಡಿ ಈ ಬಗ್ಗೆ ಒಂದು ವಿಷಯವನ್ನು ಪರಿಶೀಲನೆ ಮಾಡಬೇಕೆಂದರೆ ಇವತ್ತು ಹೆಚ್ಚು ನೀರಿನ allocation ಮಾಡಿದಂಥ ಸಂದರ್ಭದಲ್ಲಿ ಮಾತ್ರ ಅದನ್ನು ಕೊಡುವುದಕ್ಕೆ ಆಗುತ್ತದೆ. ಎರಡನೆಯದಾಗಿ, ಮಾನ್ಯ ಸುರೇಶ್ ಬಾಬುರವರು ಹೇಳಿದಂತೆ ಬೋರನಕಣಿವೆಗೆ ನೀರನ್ನು ಕೊಡುವುದರಿಂದ ಬರಗಾಲಕ್ಕೆ ಹೆಚ್ಚು ತುತ್ತಾದಂಥ ಪ್ರದೇಶಗಳಿಗೆ ಕುಡಿಯುವ ನೀರಿನ್ನು ಬೇರೆ ಕಡೆಗಳಿಗೆ ಕೊಡಲು ಸಾಧ್ಯವಾಗುತ್ತದೆ. ಇದರ ಬಗ್ಗೆ ತಾವು ಪರಿಶೀಲನೆಯಲ್ಲಿದೆಯೆಂದು ಹೇಳಿದ್ದೀರಿ. ತಾವು ಉತ್ತರ ಕೊಡುವುದಕ್ಕಿಂತ

ಎಲ್ಲರನ್ನು ಕರೆದು ಚರ್ಚೆ ಮಾಡಿ, ಈ ಬಗ್ಗೆ ಏನಾದರೂ ಒಂದು ತೀರ್ಮಾನ ಮಾಡಿ. ನಾನೂ ಬರುತ್ತೇನೆ, ಮಾನ್ಯ ಸುರೇಶ್ ಬಾಬರವರು ಬರುತ್ತಾರೆ. ನಾವು ಕುಳಿತುಕೊಂಡು ಚರ್ಚೆ ಮಾಡಿ ಇತ್ಯರ್ಥ ಮಾಡಿದರೆ ಒಳ್ಳೆಯದಾಗುತ್ತದೆಂದು ನನ್ನ ಸಲಹೆ ಇದೆ.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ವಿಷಯ ಬಹಳಷ್ಟು ಬಾರಿ ಚರ್ಚೆಯಾಗಿದೆ. ಇದು ಬಹಳ ವರ್ಷಗಳಿಂದ ಇರುವ ಬೇಡಿಕೆಯಾಗಿದೆ. ಹಿಂದೆ ಇದರ ಬಗ್ಗೆ ಪ್ರಸ್ತಾವನೆಯಾಗಿ ಬೇರೆ ಬೇರೆ ರೂಪದಲ್ಲಿ ಇದನ್ನು ಮಾಡುವುದಕ್ಕೆ ಆಗುವುದಿಲ್ಲವೆನ್ನುವ ಮಟ್ಟಕ್ಕೆ ಕೂಡ ಹೋಗಿತ್ತು. ನಾವು ಅಧಿಕಾರಕ್ಕೆ ಬಂದ ಮೇಲೆ ಇದಕ್ಕೆ ಪುನರ್ ಜೀವವನ್ನು ಕೊಟ್ಟು, ಆ ಭಾಗದ ಹುಳಿಯಾರು ಹೋಬಳಿಯಲ್ಲಿರುವಂಥ ಪರಿಸ್ಥಿತಿ ಬಹಳ ಕಷ್ಟದಾಯಕವಾಗಿರುವುದನ್ನು ಮನಗಂಡು ಈ ಯೋಜನೆಯನ್ನು ಮಾಡಿದ್ದೇವೆ. ಆ ridge ಅನ್ನು ದಾಟಿ ತರುವುದಕ್ಕೆ ಯಾವ ರೀತಿ ಸಮಸ್ಯೆಗಳಿವೆ ಎಂಬುದು ಅವರಿಗೂ ಗೊತ್ತಿದೆ. ಈ ಯೋಜನೆ ಬಹಳ ಕಷ್ಟಕರವಾಗಿರುವಂಥದ್ದನ್ನು ನಾವು ರೂಪುಗೊಳಿಸಿದ್ದೇವೆ. ಇದರಲ್ಲಿ ಎರಡು ರೀತಿ ಇದ್ದು, ಸುಮಾರು 22 ಕೆರೆಗಳನ್ನು flow irrigation ನಲ್ಲಿ, 4 ಕೆರೆಗಳನ್ನು lift irrigationನಲ್ಲಿ ಮಾಡುವಂಥ ತೀರ್ಮಾನವನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಮಾತನಾಡುವಾಗ 0.8 TMC ಬಗ್ಗೆ ಹೇಳಿದರು. ನಮ್ಮಲ್ಲಿ ಮಳೆ ಆಶ್ರಿತ ಕೆರೆಗಳು ಸ್ವಲ್ಪಮಟ್ಟಿಗೆ ಅವು ನೀರನ್ನು ಪಡೆದುಕೊಳ್ಳುತ್ತವೆ. ಆದರೆ ಅದು ಬಹಳ ಕಡಿಮೆ ಇರುವುದರಿಂದ ಅದಕ್ಕೆ ಪೂರವಾಗಿ ನಾವು ಕೊಡುತ್ತಿದ್ದೇವೆ. ನಾವು ಪೂರ್ಣ ಕೆರೆಗಳನ್ನೇ ತುಂಬಿಸುವಂಥದ್ದಲ್ಲ. ಇವತ್ತು ಶೇ.20–25ರಷ್ಟು ಸಾಮಾನ್ಯವಾಗಿ ಕೆರೆ ತುಂಬುತ್ತದೆ, ಉಳಿದದ್ದು, ಬರಗಾಲದ ರೂಪದಲ್ಲಿದ್ದು ಕಷ್ಟವಿರುವುದರಿಂದ ಅದಕ್ಕೆ ಇನ್ನು 25% ರಷ್ಟು ನೀರನ್ನು ತುಂಬಿದರೆ ಮಾತ್ರ ಈ ಎಲ್ಲಾ ಕೆರೆಗಳನ್ನು ತುಂಬುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಬೋರನಕಣಿವೆ ಬಗ್ಗೆ ಹೇಳುವುದಾದರೆ, ನಿಮಗೆಲ್ಲಾ ಗೊತ್ತಿದೆ. ಈ ಬೋರನಕಣಿವೆ ಬಹಳ ದೊಡ್ಡ ಪ್ರದೇಶವಾಗಿದೆ. ಇದು ಸುಮಾರು 2 ರಿಂದ 4 TMC ನೀರು

ಶೇಖರಣೆಯಾಗುವಂಥದ್ದು. ತಾವು ಇದಕ್ಕೆ ಸಾಕಾಗುವುದಿಲ್ಲವೆಂದು ವಾದ ಮಾಡುವಾಗ, ಬೋರನಕಣಿವೆ ಕೆರೆಯನ್ನು ತುಂಬಿಸಿ ಎಂದರೆ ಇದನ್ನು ಹೇಮಾವತಿ ಯೋಜನೆಯಿಂದ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಸದನದಲ್ಲಿ ತಪ್ಪು ಹೇಳುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ಯೋಜನೆಯನ್ನು ರೂಪಿಸಿದ್ದೇವೆ. ಇದರ ವಿವರವನ್ನು ಮಾನ್ಯ ಸದಸ್ಯರೊಂದಿಗೆ ಚರ್ಚೆ ಮಾಡುತ್ತೇವೆ. ಇದಕ್ಕೆ ಎಷ್ಟು ಸಾಧ್ಯವಿದೆ, ಅದಕ್ಕೆ ಈಗ ಉದಾಹರಣೆಗೆ ಹುಲಿಯೂರು ಟ್ಯಾಂಕ್ ಆದಮೇಲೆ ಹೆಚ್ಚಿಗೆ ಮಳೆ ಬಂದಾಗ, floods ಬಂದಾಗ ಅದು ತುಂಬಿಕೊಳ್ಳುವುದಕ್ಕೆ ಸಾಧ್ಯವಾದರೆ ಖಂಡಿತವಾಗಿಯು ಹೆಚ್ಚುವರಿ ನೀರನ್ನು ಬೇಕಾದರೆ ತುಂಬಿಸುವ ಪ್ರಯತ್ನ ಮಾಡುತ್ತೇವೆ. ಆದರೆ ಈಗ ಸೀಮಿತವಾಗಿರುವಂಥದ್ದು ತಮಗೂ ಗೊತ್ತಿದೆ. ಎಷ್ಟು water tight jacket ಇದೆ, ಆ entire regionನಲ್ಲಿ ಎಂದು. ಅದರಲ್ಲೇ ಈ ಎಲ್ಲಾ ಭಾಗಕ್ಕೆ ನೀರನ್ನು ಕೊಡುವುದಕ್ಕೆ ಪ್ರಥಮ ಬಾರಿಗೆ ಒಂದು ಒಳ್ಳೆಯ ಪ್ರಯತ್ನವಾಗುತ್ತಿದೆ. ಅವರು ಎಲ್ಲಾ ಸಹಕಾರ ಕೊಡುವುದನ್ನು ಕೊಟ್ಟಿದ್ದಾರೆ, ಅವರು ಏನಾದರೂ ವಿಶೇಷವಾಗಿ ಸಲಹೆಗಳನ್ನು ಇದ್ದರೆ ಕೊಡಲಿ, ಖಂಡಿತವಾಗಿಯೂ ಅವರೊಡನೆ ನಾನು ಚರ್ಚೆ ಮಾಡುತ್ತೇನೆ. ಈ ಯೋಜನೆ ನಮ್ಮ ಸರ್ಕಾರದ ಮುಂದೆ ಇದೆ, ಆದಷ್ಟು ಬೇಗನೆ ಇದಕ್ಕೆ ಒಂದು ಕಾಯಕಲ್ಪವನ್ನು ಕೊಡುತ್ತೇನೆ.

ಶ್ರೀ ಸಿ.ಬಿ. ಸುರೇಶ್‌ಬಾಬು: ಈ ಸ್ಕೀಮಿಗೆ ಎಲ್ಲಿಯೂ ಲಿಫ್ಟ್ ಇರಿಗೇಷನ್ ಅವಶ್ಯಕತೆ ಇಲ್ಲ ಎಂದು ನಾನಾದರೂ ಅಂದುಕೊಳ್ಳುತ್ತೇನೆ. ಏಕೆಂದರೆ 2003ರಿಂದಲೂ ಸರ್ವೆ ಮಾಡುತ್ತಿರುವಂತೆ ಶೆಟ್ಟಿಕೆರೆ, ಪೆಮ್ಮಲದೇವರಹಳ್ಳಿ ಕೆರೆಗಳಿಗೆ ಗ್ರಾವಿಟಿಯಿಂದ ತರಬಹುದು. ಏಕೆಂದರೆ ಅಲ್ಲಿಂದ ಪೂರ ಹಳ್ಳವಿದೆ. ಹಳ್ಳವಿರುವುದರಿಂದ ಈ ಸ್ಕೀಮಿಗೆ ಎಲ್ಲೂ ಕೂಡ ಲಿಫ್ಟ್ ಇರಿಗೇಷನ್ ಅವಶ್ಯಕತೆ ಇಲ್ಲ ಎಂದು ನಮ್ಮ ಇಂಜಿನಿಯರ್‌ಗಳು ಸೇರಿದಂತೆ ನಾವೆಲ್ಲರೂ ಮನಗಂಡಿದ್ದೇವೆ. ನಾನು ಸಚಿವರಲ್ಲಿ ವಿನಂತಿ ಮಾಡುವುದು ಇಷ್ಟೇ, ಗ್ರಾವಿಟಿ ಮೇಲೆ ಹೋದರೆ ಖಂಡಿತವಾಗಿಯೂ ಇದು ಶಾಶ್ವತವಾಗಿ ಕುಡಿಯುವ ನೀರಿನ ಯೋಜನೆಯಾಗುತ್ತದೆ. ಲಿಫ್ಟ್ ಇರಿಗೇಷನ್

ಎಂದು ಮಾಡಲು ಹೋದರೆ, ಕರೆಂಟ್ ಬಿಲ್ ಕಟ್ಟದೇ ಎಷ್ಟೋ ಲಿಫ್ಟ್ ಇರಿಗೇಷನ್‌ಗಳಿಗೆ ಆಗಿರುವ ಸಮಸ್ಯೆಗಳೇ ಇಲ್ಲೂ ಆಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ: ಉತ್ತರ ಕೊಡುವುದಕ್ಕೆ ಬಿಡಿ. ಸುರೇಶ್‌ಬಾಬುರವರೇ, ಯಾವಯಾವ ಕಾಲದಲ್ಲಿ ಏನೇನು ತೀರ್ಮಾನವಾಗಿದೆ ಎನ್ನುವುದನ್ನು ನಾನು ಹೇಳಲು ಹೋಗುತ್ತಿಲ್ಲ. ಶೆಟ್ಟಿಕೆರೆ, ತಿಮ್ಮಾಪುರ ಕೆರೆ, ಸಾಸಲು ಪೆಮ್ಮಲದೇವರಹಳ್ಳಿ ಕೆರೆಯಿಂದ ಪ್ರಾರಂಭವಾಗಿ ಹುಲಿಯೂರು ಕೆರೆಯವರೆಗೂ ಕೂಡ ಗ್ರಾವಿಟಿ ಮೇಲೆಯೇ ತೆಗೆದುಕೊಂಡಿದ್ದೇವೆ. ಅದರ ಜೊತೆಗೆ, ಹುಲಿಯೂರು ಕೆರೆ, ತಮ್ಮಟ್ಟಿ ಕೆರೆ, ಮಾಚನಸಂದ್ರ, ಕುಪ್ಪೂರು, ಕುಪ್ಪೂರು-2, ಪಟ್ಟದೇವರು, ವಡಗೇರಿ, ದಾಬೆ ಈ ರೀತಿ ಬ್ರಾಂಚ್ ಔಟ್ ಮಾಡಿ, 22 ಕೆರೆಗಳನ್ನು ಗ್ರಾವಿಟಿಯಲ್ಲೇ ಮಾಡುತ್ತಿದ್ದೇವೆ. ಅದೆಲ್ಲವೂ ಆದಮೇಲೆ ಮುಂದೆ ಚೈನೇಜ್ 45 ಕಿ.ಮೀ.ನಲ್ಲಿ ಜೆ.ಸಿ.ಪುರ ಮತ್ತು ನಡುವಿನಹಳ್ಳಿ ಕೆರೆಗಳು ಗ್ರಾವಿಟಿಯಲ್ಲಿ ಬರುವುದಿಲ್ಲ. ಇಂಜಿನಿಯರುಗಳು ಅದನ್ನು ತಾಂತ್ರಿಕವಾಗಿ, ಸಮರ್ಪಕವಾಗಿ ಮಾಡಿದ್ದಾರೆ. ನಿಮಗೆ ನಾವು ಹೆಚ್ಚಿನ ನೀರನ್ನು ಕೊಡುತ್ತಿದ್ದೇವೆ. ನೀವು ಕೇಳಿದುದಕ್ಕಿಂತ ನಾಲ್ಕು ಕೆರೆಗಳನ್ನು ಹೆಚ್ಚಿಗೆ ತುಂಬಿಸುತ್ತಿದ್ದೇವೆ. ಅದಕ್ಕಾಗಿ ನೀವು ನನಗೆ ಅಭಿನಂದನೆ ಸಲ್ಲಿಸಬೇಕು.

ಶ್ರೀ ಸಿ.ಬಿ. ಸುರೇಶ್‌ಬಾಬು: ಮಾನ್ಯ ಜಲಸಂಪನ್ಮೂಲ ಸಚಿವರು ಈ ಒಂದು ಯೋಜನೆಯನ್ನು ಬೇಗನೆ ಇಂಪ್ಲಿಮೆಂಟ್ ಮಾಡಿಕೊಡಲಿ ಎಂದು ಹೇಳುವುದರ ಜೊತೆಗೆ, ಅವರು ಇದರ ಕಡೆ ಹೆಚ್ಚಿನ ರೀತಿಯಲ್ಲಿ ಗಮನವನ್ನು ಹರಿಸಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸಲಿಕ್ಕೆ ಬಯಸುತ್ತೇನೆ.

ಗೌರಿಬಿದನೂರು ತಾಲ್ಲೂಕಿನಲ್ಲಿ ಕಾರ್ಖಾನೆ ಸ್ಥಾಪನೆ

152(516) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ ;

ಅ) ಗೌರಿಬಿನದೂರು ತಾಲ್ಲೂಕು ಕುಡಮಲಕುಂಟೆಯ ಬಳಿ 250 ಎಕರೆಯನ್ನು ಕೈಗಾರಿಕಾ ಪ್ರದೇಶವೆಂದು ಘೋಷಿಸಿರುವುದು ನಿಜವಲ್ಲವೇ ;